2) ಬಂದಿದ್ದರೆ, ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಗುಲ್ಬರ್ಗಾ ಜಿಲ್ಲೆ, ಕಮಲಾಪುರ ಕ್ಷೇತ್ರದ ವಿ.ಕೆ. ಸಲಗರ ಗ್ರಾಮಕ್ಕೆ ಮಂಜೂರಾದ ಮಿನಿ ಅಂಬೇಡ್ಕರ್ ಭವನದ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದ್ದು ಛತ್ತು (ರೂಫ್) ಹಾಕಲಾಗಿದೆ. ಬಾಕಿ ಉಳಿದ ಪ್ಲಾಸ್ಟರ್, ಫ್ಲೋರಿಂಗ್ ಹಾಗೂ ಇತರೆ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಮಲ್ಪೆ ಮೀನುಗಾರಿಕೆ ಬಂದರು ಕಾಮಗಾರಿ

1607 (2026) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲ್ಪೆ ಮೀನುಗಾರಿಕಾ ಬಂದರಿನ 2ನೇ ಹಂತದ ಯೋಜನೆಯ ವಿವರಗಳೇನು? ಇವುಗಳಿಗೆ ಇಲಾಖೆ ತಯಾರಿಸಿದ ಹೆಚ್ಚುವರಿ ಅಂದಾಜು ಪಟ್ಟಿಯ ವಿವರಗಳೇನು? ಈ ಹೆಚ್ಚುವರಿ ಅಂದಾಜು ಪಟ್ಟಿಗೆ ಕೇಂದ್ರದ ಅನುಮೋದನೆ ದೊರಕಿದೆಯೇ?

ಆ) ದೊರಕದಿದ್ದಲ್ಲಿ ಕಾರಣವೇನು? 2ನೇ ಹಂತದ ಯೋಜನೆ ಯಾವಾಗ ಸಂಪೂರ್ಣಗೊಳ್ಳುವುದು? ದಿನಾಂಕ 28/02/2003ರ ವರಗೆ ಈ ಯೋಜನೆಗೆ ಬಿಡುಗಡೆಯಾದ ಹಣ ಎಷ್ಟು ವಿವರ ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಭಾರತ ಸರ್ಕಾರವು ದಿನಾಂಕ 19-2-1996ರಲ್ಲಿ ಉಡುಪಿ ಜಿಲ್ಲೆ, ಮಲ್ಪೆ ಮೀನುಗಾರಿಕೆ ಬಂದರಿನ 2ನೇ ಹಂತದ ಕಾಮಗಾರಿಯ ಅಂದಾಜು ವೆಚ್ಚ ರೂ. 1196.70 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ.

ರೂ. 21.60 ಕೋಟಿಯ ಹೆಚ್ಚುವರಿ ಅಂದಾಜು ಪಟ್ಟಿಯನ್ನು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ತಯಾರಿಸಿದ್ದು, ರಾಜ್ಯ ಸರ್ಕಾರವು ಸದರಿ ಪರಿಷ್ಕೃತ ಅಂದಾಜು ಪಟ್ಟಿಗೆ ದಿನಾಂಕ 19-11-2002ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ.

ಹೆಚ್ಚುವರಿ ಅಂದಾಜು ಪಟ್ಟಿಗೆ ಕೇಂದ್ರದ ಅನುಮೋದನೆ ದೊರೆತಿರುವುದಿಲ್ಲ.

ಆ) ನ್ಯಾಯಾಲಯ ಪ್ರಕರಣ ಅಥವಾ ನೈಸರ್ಗಿಕ ವಿಕೋಪ ಕಾರಣಗಳಲ್ಲದೆ ಬೇರೆ ಕಾರಣಗಳಿಂದ ಯೋಜನಾ ವೆಚ್ಚ ಪರಿಷ್ಕರಣೆಗೊಂಡಲ್ಲಿ ಅಂತಹ ಯೋಜನಾ ವೆಚ್ಚದ ಪರಿಷ್ಕರಣೆಯನ್ನು ಭಾರತ ಸರ್ಕಾರವು ಪರಿಗಣಿಸುವುದಿಲ್ಲ. ಈ ಯೋಜನೆಗಾಗಿ ಭಾರತ ಸರ್ಕಾರದಿಂದ ಮಂಜೂರಾದ ಅಂದಾಜು ವೆಚ್ಚ ರೂ. 1196.70 ಲಕ್ಷಗಳಿಗಿಂತ ಅಧಿಕವಾಗಿ ಉಂಟಾಗುವ ಹೆಚ್ಚಳವನ್ನು ರಾಜ್ಯ ಸರ್ಕಾರವೇ ಭರಿಸತಕ್ಕದ್ದೆಂದು ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ತಿಳಿಯಪಡಿಸಿರುತ್ತದೆ.

ಧಕ್ಕೆ, ಜಟ್ಟಿ, ಹೂಳೆತ್ತುವಿಕೆ, ಹರಾಜು ಪ್ರಾಂಗಣ, ನೀರು ಸರಬರಾಜು, ಆಂತರಿಕ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ದಾರಿದೀಪ ವ್ಯವಸ್ಥೆ ಪ್ರಗತಿಯಲ್ಲಿದೆ. ಕಛೇರಿ

ಕಟ್ಟಡ ನಿರ್ಮಾಣ ಕಾಮಗಾರಿ ಬಾಕಿ ಇರುತ್ತದೆ. ಇದನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳು ಬಹುತೇಕ ಮುಗಿದಿದ್ದು ಇಷ್ಟರಲ್ಲೇ ಮುಗಿಯುವ ನಿರೀಕ್ಷೆ ಇದೆ.

ಈ ಯೋಜನೆಗೆ 2002-03ನೇ ಸಾಲಿನವರೆಗೆ ಒಟ್ಟು ರೂ. 2525 ಲಕ್ಷಗಳು ಬಿಡುಗಡೆಯಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

	(ರೂ. ಲಕ್ಷಗಳಲ್ಲಿ)
1995-1996	360.00
1996-1997	400.00
1997-1998	300.00
1998-1999	600.00
1999-2000	450.00
2000-2001	165.00
2001-2002	150.00
2002-2003	100.00
ಒಟ್ಟು	2525.00

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು

1608 (2027) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2001-02, 2002-03ರ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ನೀಡಲ್ಪಟ್ಟ ಸಹಾಯಧನ ಸಹಿತ ಸಾಲಸೌಲಭ್ಯಗಳೇನು; (ಜಿಲ್ಲಾವಾರು ವಿವರ ನೀಡಿರಿ)

ಆ) 2001-02, 2002-03ರ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರದಿಂದ ವಿವರ ನೀಡಿರಿ) ಇವುಗಳಲ್ಲಿ ಎಷ್ಟು ಫಲಾನುಭವಿಗಳಿಗೆ 28-2-2003ರ ವರೆಗೆ ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 2001-02 ಮತ್ತು 2002-03ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಿಗೆ ನೀಡಲ್ಪಟ್ಟ ಸಹಾಯ ಧನ ಸಹಿತ ಸೌಲಭ್ಯಗಳ ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಲಾಗಿದೆ.

ಆ) ಉಡುಪಿ ಜಿಲ್ಲೆಯಲ್ಲಿ 2001-02ನೇ ಸಾಲಿನಲ್ಲಿ ಒಟ್ಟು 1208 ಹಿಂದುಳಿದ ವರ್ಗಗಳ ಜನರಿಗೆ ಹಾಗೂ 2002-03ನೇ ಸಾಲಿನಲ್ಲಿ (ಫೆಬ್ರವರಿ 2003ರವರೆಗೆ) 672 ಹಿಂದುಳಿದ ವರ್ಗಗಳ ಜನರಿಗೆ ಸೌಲಭ್ಯವನ್ನು ವಿವಿಧ ಯೋಜನೆಗಳಲ್ಲಿ ನೀಡಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ-3ರಲ್ಲಿ ನೀಡಿದೆ.